ಅಪರ ಸಿವಿಲ್ ನ್ಯಾಯಾಧೀಶರು ಜೆಎಂಎಫ್‌ಸಿ ನ್ಯಾಯಾಲಯ, ಚನ್ನಪಟ್ಟಣ

CC No : 1028/2014

CW.5 PW.3

**ಹೆಸರು**: ನಾಗರಾಜು
ತಂದೆ : ಲೇಟ್ ಜಿ ಕೆಂಪಯ್ಯ
ವಯಸ್ಸು : 34 ವರ್ಷ
ಉದ್ಯೋಗ : ಮುಖ್ಯ ಪೇದೆ ಕುದೂರು ಪೋಲೀಸ್ ಠಾಣೆ
ವಾಸ : ಮಾಗಡಿ

ಸ್ವಾಕ್ಷಿಯನ್ನುಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.
ಮುಖ್ಯ ವಿಚಾರಣೆ ಎ.ಪಿ.ಪಿ ಯವರಿಂದ: ದಿ:25.08.2022

2009 ರಿಂದ 2018 ರವರೆಗೂ ಚನ್ನಪಟ್ಟಣ ಪೂರ್ವ ಪೋಲೀಸ್ ಠಾಣೆಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.19.05.2013 ರಂದು ಚಾಸಾ-1 ರವರಿಗೆ ಬಂದ ಖಚಿತ ಮಾಹಿತಿಯ ಮೇರೆಗೆ ನಾನು ಚಾಸಾ-1, 6, 7 ಮತ್ತು 12 ರವರು ಸುಮಾರು 2.00 ಗಂಟೆ ಸಮಯಕ್ಕೆ ಆರೋಪಿಯ ಮನೆಯ ಹತ್ತಿರ ಹೋಗಿ ನೋಡಲಾಗಿ ಮನೆಯ ವರಾಂಡದಲ್ಲಿ ಎಂಟು ಕಬ್ಬಿಣದ ಬ್ಯಾರಲ್ ನಲ್ಲಿ ತಲಾ 25 ಲೀಟರ್ ನೀಲಿ ಸೀಮೆ ಎಣ್ಣೆ ತುಂಬಿರುವ ಬ್ಯಾರಲ್ ಗಳು ಒಂದು ಲೀಟರ್ ನ 12 ಬಾಟಲುಗಳಲ್ಲಿ ನೀಲಿ ಸೀಮೆ ಎಣ್ಣೆ ಯಾವುದೇ ಪರವಾನಿಗೆ ಇಲ್ಲದೇ ಇರುವುದು ಕಂಡುಬಂದಿರುತ್ತದೆ. ದಿಲೀಪ್ ಏಜೆನ್ಸಿಗೆ ಸಂಬಂಧಿಸಿದ ಎರಡು ಬಿಲ್ ಗಳು ಕಂಡುಬಂದಿರುತ್ತದೆ. ಬಿಲ್ ನಂ.75 ರಲ್ಲಿ ಬಿ ಮೆಹಬೂಬ್ ಎಂದು ಮತ್ತು ಬಿಲ್ ನಂಬರ್ 80 ರಲ್ಲಿ ನಿಸಾರ್ ಅಹಮ್ಮದ್ ಎಂದು ನಮೂದು ಆಗಿರುತ್ತದೆ. ಸದರಿ ಎಂಟು ಕಬ್ಬಿಣದ ಬ್ಯಾರಲ್ ಗಳು, 25 ಲೀಟರ್ ನ ನಾಲ್ಕು ಕ್ಯಾನ್ ಗಳು, ಅವುಗಳಲ್ಲಿ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲು ಮಾದರಿಗಾಗಿ ತೆಗೆದುಕೊಂಡುಲೀಟರ್ ನ 12 ಬಾಟಲಗಳನ್ನು ಕಳುಹಿಸಿರುತ್ತೇವೆ. ನಿಪಿ-1 ರಂತೆ ಪಂಚನಾಮೆ ಮಾಡಿ ನಿಪಿ-1 ಕ್ಕೆ ನಾನು ಸಹಿ ಮಾಡಿರುತ್ತೇನೆ. ಸಹಿಯ ಸಹಿಯನ್ನು ನಿಪಿ-1 ಸಿ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ 12 ಮಾದರಿಗಾಗಿ ವಿಧಿವಿಜ್ಞಾನ

ಪ್ರಯೋಗಾಲಯಕ್ಕೆ ಕಳುಹಿಸಿದ್ದ ಬಾಟಲುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಮುದ್ದೆ ಮಾಲು 1 ಎಂದು ಗುರುತಿಸಲಾಯಿತು. ರಸೀದಿಗಳನ್ನು ಮುದ್ದೆ ಮಾಲು 2 ಮತ್ತು 3 ಎಂದು ಗುರುತಿಸಲಾಯಿತು. ಆರೋಪಿಯು ನ್ಯಾಯಾಲಯದ ಮುಂದೆ ಹಾಜರಿದ್ದು ಸದರಿ ಆರೋಪಿಯನ್ನು ನೋಡಿ ಗುರುತಿಸುತ್ತಾರೆ. ನಾನು ಪೋಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಹೆಚ್ ಕೆ ವಕೀಲರಿಂದಃ

ಘಟನಾ ಸ್ಥಳಕ್ಕೆ ನಾನು ಚಾಸಾ-*1, 6, 7* ಮತ್ತು *12* ರವರು ಜೀಪ್ ನಂಬರ್ ಕೆಎ-*42*-ಜಿ-*93* ನಲ್ಲಿ ಹೋದೆವು. ಸದರಿ ವಿಚಾರವನ್ನು ನಾನು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ. ನಾವು ಘಟನಾ ಸ್ಥಳಕ್ಕೆ ಹೋದಾಗ ಸುಮಾರು ಮದ್ಯಾಹ್ನ *2.00* ಗಂಟೆ ಸಮಯವಾಗಿತ್ತು. ಘಟನೆ ನಡೆದ ಮನೆ ನಂಬರ್ ನನಗೆ ಗೊತ್ತಿಲ್ಲ. ಮನೆಯು ರಸ್ತೆಯ ಪಕ್ಕದಲ್ಲಿಯೇ ಇದೆ. ಘಟನಾ ಸ್ಥಳದಲ್ಲಿಯೇ ಎಷ್ಟು ಬ್ಯಾರಲ್ ಗಳಲ್ಲಿ ಎಷ್ಟು ಎಷ್ಟು ಲೀಟರ್ ನೀಲಿ ಸೀಮೆ ಎಣ್ಣೆ ಇತ್ತು ಎಂದು ಅಳತೆ ಮಾಡಿದೆವು. ಚಾಸಾ-*10* ರವರು ಅಂದಾಜಿನ ಮೇಲೆ ಹೇಳಿದ ಅಳತೆಯ ಪ್ರಕಾರ ನಮೂದು ಮಾಡಿಕೊಂಡಿರುತ್ತೇವೆ. ಕಬ್ಬಿಣ ಬ್ಯಾರಲ್ ಗಳು ಯಾವ ಕಂಪನಿಗೆ ಸೇರಿದೆ, ಅದರ ಬಣ್ಣ ಗೊತ್ತಿಲ್ಲ. ಮುದ್ದೆ ಮಾಲು *2* ಮತ್ತು *3* ಅಲ್ಲೇ ಇದ್ದ ಛೇರ್ ಮೇಲೆ ಇತ್ತು. ಮುದ್ದೆ ಮಾಲು *2* ಮತ್ತು *3* ಛೇರ್ ಮೇಲೆ ಇತ್್ತ ಎಂದು ನಿಪಿ-*1* ರಲ್ಲಿ ನಮೂದು ಮಾಡಿರುವುದಿಲ್ಲ. ಮುದ್ದೆ ಮಾಲು *1* ಮಾದರಿಗಾಗಿ ತೆಗೆದುಕೊಂಡ ಒಂದು ಲೀಟರ್ ನ *12* ಬಾಟಲ್ ಗಳಲ್ಲಿ ಕಾಲುಭಾಗ ಸೀಮೆ ಎಣ್ಣೆ ಇದೆ ಎಂದರೆ ಸರಿ. ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಬರ್ತಿ ಯಾಗಿದ್ದ *12* ಬಾಟಲ್ ಗಳನ್ನು ಕಳುಹಿಸಿರುತ್ತೇವೆ ಎಂದರೆ ಸರಿ. ಮುದ್ದೆ ಮಾಲು *1* ರ ಮೇಲೆ ನಾನು ಸಹಿ ಮಾಡಿರುವುದಿಲ್ಲ. ಬಾಟಲುಗಳು ಯಾವ ಕಂಪನಿಯ ಬಾಟಲುಗಳು ಎಂದು ನಮೂದು ಆಗಿಲ್ಲ ಎಂದರೆ ಸರಿ. ಘಟನಾ ಸ್ಥಳದ ಚೆಕ್ಕು ಬಂದಿಯನ್ನು ಹೇಳಲು ಆಗುವುದಿಲ್ಲ. ಮಹಜರು ಯಾವ ಸಮಯಕ್ಕೆ ಮುಗಿಯಿತು ಎಂದು ನೆನಪಿಲ್ಲ. ಮಹಜರ್ ಗೆ ಯಾರು ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಅದರೆ ಮಹಜರ್ ಗೆ ಪೋಲೀಸರೇ ಸಹಿ ಮಾಡಿದ್ದಾರೆ ಎಂದು

ನುಡಿಯುತ್ತಾರೆ. ಮಹಜರ್ ನಲ್ಲಿ ಏನು ಬರೆದಿದೆ ನಿಮಗೆ ಸಂಪೂರ್ಣ ವಾಗಿ ಗೊತ್ತಿದೆಯೇ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಹಿರಿಯ ಅಧಿಕಾರಿಗಳು ಹೇಳಿದ ಮಾತನ್ನು ನಾನು ಪಾಲಿಸುತ್ತೇನೆ ಎಂದರೆ ಸರಿ. ನಾವು ಆರೋಪಿಯ ಮನೆಗೆ ಭೇಟಿನೀಡಿಲ್ಲ ಮತ್ತು ಅಲ್ಲಿ ಯಾವುದೇ ಸೀಮೆ ಎಣ್ಣೆಯನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿ. ಘಟನಾ ಸ್ಥಳದಲ್ಲಿ ಮುದ್ದೆ ಮಾಲು *1* ರಿಂದ *3*ನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿ ತಪ್ಪಿಸಿಕೊಂಡು ಓಡಿ ಹೋಗುವ ಸಮಯದಲ್ಲಿ ಆರೋಪಿಯನ್ನು ಹಿಡಿಯಲು ಪ್ರಯತ್ನಿಸಲಿಲ್ಲ ಎಂದರೆ ಸರಿ. ಆರೋಪಿಯ ಗುರುತಿನ ಬಗ್ಗೆ ಕುರುಹುಗಳು ಮತ್ತು ಯಾವ ಬಣ್ಣದ ಬಟ್ಟೆಯನ್ನು ಧರಿಸಿದ್ದ ಎಂದು ನನ್ನ ಹೇಳಿಕೆಯಲ್ಲಿ ಹೇಳಲಿಲ್ಲ. ಮೇಲ್ ಅಧಿಕಾರಿಗಳ ಮಾತು ಕೇಳಿಕೊಂಡು ಅಂಕಿಅಂಶಕ್ಕೋಸ್ಕರ ವಾರಸುದಾರರು ಇಲ್ಲದ ಮುದ್ದೆ ಮಾಲುಗಳನ್ನು ಸೃಷ್ಟಿಸಿಕೊಂಡು ಸುಳ್ಳು ಪ್ರಕರಣವನ್ನು ದಾಖಲುಮಾಡಿದ್ದೇವೆ ಎಂದರೆ ಸರಿಯಲ್ಲ. ಘಟನಾ ಸ್ಥಳದ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ. ಘಟನೆ ನಡೆದ ಸುಮಾರು *5-6*ರ ತಿಂಗಳ ನಂತರ ಪೋಲೀಸರಿಗೆ ನನ್ನ ಹೇಳಿಕೆ ನೀಡಿರುತ್ತೇನೆ. ನಾನು ಯಾವುದೇ ಹೇಳಿಕೆ ನೀಡಿಲ್ಲ ಮತ್ತು ಹಿರಿಯ ಅಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಓ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.